2017 ಕ.ತೀ.ವ. 1038

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

## ಸ್ವಾಮಿ @ ಎಲಯಪ್ಪ ಮತ್ತು ಇತರರು –ವಿರುದ್ಧ– ಶಿವಲಿಂಗಯ್ಯ ಮತ್ತು ಇತರರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಜಿಲ್ಲಾ ನ್ಯಾಯಾಲಯವು ಅರ್ಜಿದಾರರು ಸಲ್ಲಿಸಿದ್ದ ಸಂಕೀರ್ಣ ಮೇಲ್ಮನವಿಯನ್ನು ವಜಾಗೊಳಿಸಿದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.

ಅಧಿವಿಚಾರಣಾ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ ಅರ್ಜಿದಾರರು 13 ವರ್ಷಗಳ ಕಾಲವಿಳಂಬವನ್ನು ವಿವರಿಸಲು ಯಾವುದೇ ಸಕಾರಣಗಳನ್ನು ನೀಡಿಲ್ಲವೆಂದು ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಈ ಕಾರಣದಿಂದ ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು:* | *ಪ್ಯಾರಾಗಳಲ್ಲಿ* |
|---|---|
| *1. (2000) 9 ಎಸ್‌ಸಿಸಿ 94 ಬಿಹಾರ್ ಸರ್ಕಾರ ಮತ್ತು ಇತರರು –ವಿರುದ್ಧ– ಕಾಮೇಶ್ವರ ಪ್ರಸಾದ್ ಸಿಂಗ್ ಮತ್ತು ಇನ್ನೊಬ್ಬರು* | *(ಉಲ್ಲೇ) 6* |
| *2. (2014) 4 ಎಸ್‌ಸಿಸಿ 163 ಮನೋಹರನ್ –ವಿರುದ್ಧ– ಶಿವರಾಜನ್ ಮತ್ತು ಇತರರು* | *(ಉಲ್ಲೇ) 6* |

* ರಿಟ್ ಅರ್ಜಿ ಸಂ.3452–3455/2016 (ಜಿಎಂ–ಸಿಪಿಸಿ), ದಿನಾಂಕ: 1ನೇ ಮಾರ್ಚ್, 2017.

*3. (1987) 2 ಎಸ್‌ಸಿಸಿ 107*
*ಕಲೆಕ್ಟರ್ ಭೂಸ್ವಾಧೀನ-ವಿರುದ್ಧ-*
*ಕಾಟಜಿ ಮತ್ತು ಇತರರು (ಉಲ್ಲೇ) 15*

*4. 2009 (2) ಎಸ್‌ಸಿಸಿ 479*
*ಎಸ್.ಎಸ್. ಬಾಲು ಮತ್ತು ಇನ್ನೊಬ್ಬರು*
*-ವಿರುದ್ಧ- ಕೇರಳ ಸರ್ಕಾರ ಮತ್ತು ಇತರರು (ಉಲ್ಲೇ) 19*

*5. (2011) 5 ಎಸ್‌ಸಿಸಿ 607*
*ಶಂಕರ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ*
*-ವಿರುದ್ಧ- ಎಂ.ಪ್ರಭಾಕರ್ ಮತ್ತು ಇತರರು (ಉಲ್ಲೇ) 20*

ಅರ್ಜಿದಾರರ ಪರ : ಶ್ರೀ ಎಲ್. ಶ್ರೀನಿವಾಸ್ ಬಾಬು, ವಕೀಲರು- ಪರವಾಗಿ
ಶ್ರೀಮತಿ ಮಂಜುಳ.ಡಿ, ವಕೀಲರು

## ಆಜ್ಞೆ

**ನ್ಯಾಯಮೂರ್ತಿ ಬಿ. ವೀರಪ್ಪ:**

***ಕರ್ನಾಟಕ ಗ್ರಾಮ ಕಛೇರಿಗಳ ರದ್ದಿಯಾತಿ ಅಧಿನಿಯಮ, 1961***ರ ಅಡಿಯಲ್ಲಿ ತಹಸೀಲ್ದಾರರಿಂದ ಮಾಡಿದ ಆದೇಶ ದಿನಾಂಕ 28.06.1999ರ ವಿರುದ್ಧ 2ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು, ಮೈಸೂರು, ಇವರ ಮುಂದೆ ಈ ಅಪೀಲನ್ನು ಹೂಡಲು 13 ವರ್ಷಗಳ ಮಿತಿ ಮೀರಿದ ವಿಳಂಬವಾಗಿದೆಯೆನ್ನುವ ಕಾರಣದ ಮೇಲೆ, ಈ ಅಪೀಲನ್ನು ವಜಾಗೊಳಿಸಿ, ಎಂ.ಎ. ಸಂ.27/2011ರಲ್ಲಿ ಮಾಡಿದ ಆದೇಶ ದಿನಾಂಕ 03.10.2015ರ ವಿರುದ್ಧ ಅರ್ಜಿದಾರರಿಂದ ಈ ರಿಟ್ ಅರ್ಜಿಗಳನ್ನು ದಾಖಲು ಮಾಡಲಾಗಿದೆ.

2. ಎಂ. ಶೆಟ್ಟಿಹಳ್ಳಿ ಗ್ರಾಮ, ರಾವಂದೂರು ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕಿನ ಸರ್ವೆ ನಂ.71 ಮತ್ತು 72ರ ಸಂಬಂಧದಲ್ಲಿ 11 ಎಕರೆಗಳು 23 ಗುಂಟೆಗಳು ಮತ್ತು 09 ಎಕರೆಗಳು 19 ಗುಂಟೆಗಳ ವಿಸ್ತೀರ್ಣರುವ, ಒಟ್ಟಾರೆ ವಿಸ್ತೀರ್ಣ 21 ಎಕರೆಗಳು 02 ಗುಂಟೆಗಳನ್ನು 1940–41ನೇ ವರ್ಷದಲ್ಲಿ ಅರ್ಜಿದಾರರ ಅಜ್ಜನಿಗೆ ಮಂಜೂರು ಮಾಡಲಾಗಿತ್ತೆಂಬುದು ಅರ್ಜಿದಾರನ ಪ್ರಕರಣವಾಗಿದೆ. ತರುವಾಯ, ಲೇಟ್ ಬಾರಕಿ ಸಿದ್ಧಯ್ಯನ ಕಾನೂನು ವಾರಸುದಾರರು, ಸದರಿ ಸ್ವತ್ತುಗಳ ಸ್ವಾಧೀನದಲ್ಲಿರುತ್ತಾರೆ ಮತ್ತು ಅನುಭೋಗಿಸುತ್ತಿದ್ದಾರೆ. ತಹಸೀಲ್ದಾರರು, ಪಿರಿಯಾಪಟ್ಟಣ ತಾಲ್ಲೂಕು, ಆದೇಶ ದಿನಾಂಕ 28.06.1999ರ ಮೂಲಕ, ಪ್ರಸ್ತುತ ಅರ್ಜಿದಾರರು ಸೇರಿದಂತೆ 1 ರಿಂದ 17ನೇ ಪ್ರತ್ಯರ್ಜಿದಾರರಿಗೆ ಆ ಭೂಮಿಯನ್ನು ಮರುಮಂಜೂರು ಮಾಡಿದ್ದರೆಂಬುದನ್ನು ತಿಳಿದುಕೊಂಡಿರುತ್ತಾರೆ. ತರುವಾಯ ಅರ್ಜಿದಾರರು, 2000ನೇ ವರ್ಷದಲ್ಲಿ ದಾಖಲೆಗಳಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ಅದಕ್ಕನುಸಾರವಾಗಿ ತಹಸೀಲ್ದಾರರು, ದಾಖಲೆಗಳು, ಲಭ್ಯವಿಲ್ಲವೆಂದು ಹೇಳಿದ್ದು, ದಿನಾಂಕ 30.08.2000 ರಂದು ಹಿಂಬರಹ ನೀಡಿದ್ದಾರೆ. ಅರ್ಜಿದಾರರು, ಸದರಿ ಜಮೀನುಗಳಲ್ಲಿ ಶಾಂತಿಯುತವಾಗಿ ಸ್ವಾಧೀನದಲ್ಲಿರುತ್ತಾರೆ ಮತ್ತು ಅನುಭೋಗಿಸುತ್ತಿದ್ದಾರೆಯೆಂದು ಮುಂದುವರೆದು ವಾದಿಸಲಾಗಿದೆ. 2010ನೇ ವರ್ಷದ ಅವಧಿಯಲ್ಲಿ, 1 ರಿಂದ 17ನೇ ಪ್ರತ್ಯರ್ಜಿದಾರರು, ಆ ಭೂಮಿಯನ್ನು ಅತಿಕ್ರಮಣದ ಮೂಲಕ ಹಸ್ತಕ್ಷೇಪ ಮಾಡಿದ್ದಾರೆ ಮತ್ತು ಆ ಭೂಮಿಯನ್ನು, ಅಧಿಕಾರ ವ್ಯಾಪ್ತಿಯ ತಹಸೀಲ್ದಾರರಿಂದ ಅವರಿಗೆ ಮರು ಮಂಜೂರು ಮಾಡಲಾಗಿದೆಯೆಂದು ಹೇಳಿ ಅರ್ಜಿದಾರರ ಶಾಂತಿಯುತ ಸ್ವಾಧೀನ ಮತ್ತು ಅನುಭೋಗಕ್ಕೆ ಅಡ್ಡಿ ಮಾಡಿದ್ದಾರೆ. ಆದ್ದರಿಂದ, ಮಾಹಿತಿ ಹಕ್ಕು ಅಧಿನಿಯಮದ ಮೇರೆಗೆ ಅರ್ಜಿಯನ್ನು ದಾಖಲು ಮಾಡುವುದರ ಮೂಲಕ ತಹಸೀಲ್ದ್ದಾರ್‌ರಿಗೆ ಅರ್ಜಿದಾರರು ಮತ್ತೇ ಮನವಿ ಮಾಡಿದ್ದು, ಅದರಲ್ಲಿರುವಂತೆ ತಹಸೀಲ್ದಾರರು, ದಿನಾಂಕ 23.06.2010 ಮತ್ತು 30.04.2010ರ ಹಿಂಬರಹದ ಮೂಲಕ, ಸದರಿ ಸರ್ವೆ ನಂಬರ್‌ಗಳ ಸಂಬಂಧದಲ್ಲಿ ದಾಖಲೆಗಳು, ಲಭ್ಯವಿಲ್ಲವೆಂದು ಹೇಳಿದ್ದಾರೆ. ತದನಂತರ, ಪ್ರಸ್ತುತ ಅರ್ಜಿದಾರರು ಸೇರಿದಂತೆ 1 ರಿಂದ 17ನೇ ಪ್ರತ್ಯರ್ಜಿದಾರರ ಹೆಸರಿನಲ್ಲಿ ಆ ಭೂಮಿಗಳನ್ನು ಮರು ಮಂಜೂರು ಮಾಡಿದ ತಹಸೀಲ್ದಾರರು, ಪಿರಿಯಾಪಟ್ಟಣ ಇವರಿಂದ ಮಾಡಿದ

ಆದೇಶದ ವಿರುದ್ಧ, ಜಿಲ್ಲಾ ನ್ಯಾಯಾಲಯ, ಮೈಸೂರು ಇವರ ಮುಂದೆ ಸಂಕೀರ್ಣ ಅಪೀಲು ಸಂ.27/2011ನ್ನು ಅರ್ಜಿದಾರರು ದಾಖಲು ಮಾಡಿದ್ದಾರೆ. ಈ ಅಪೀಲನ್ನು ದಾಖಲಿಸಲು ವಿಳಂಬಮಾಡಿದ್ದು, ಆದ್ದರಿಂದ, ಪ್ರತ್ಯೇಕ ಅರ್ಜಿಯನ್ನು, ಮಿತಿಮೀರಿದ ವಿಳಂಬವನ್ನು ಮನ್ನಾಮಾಡಲು ದಾಖಲಿಸಲಾಗಿದೆ. ವಿಳಂಬ ಅರ್ಜಿಯಲ್ಲಿರುವಂತೆ, ಪ್ರಶ್ನಿತ ಆದೇಶವನ್ನು, ತಹಸೀಲ್ದಾರರಿಂದ ಮಾಡಲಾಗಿದೆಯೆಂದು, ತಮಗೆ ಡಿಸೆಂಬರ್ 2010ನೇ ತಿಂಗಳಲ್ಲಿ ಮಾತ್ರ ತಿಳಿದುಬಂದಿದೆಯೆಂದು ಹೇಳಲಾಗಿದೆ ಮತ್ತು ತದನಂತರ, ಪ್ರಸ್ತುತ ಅರ್ಜಿದಾರರು ಸೇರಿದಂತೆ 1 ರಿಂದ 17ನೇ ಪ್ರತ್ಯರ್ಜಿದಾರರ ಹೆಸರಿನಲ್ಲಿ ಮರು ಮಂಜೂರಾತಿಯಾಗಿರುವ ದಾಖಲೆಗಳನ್ನು ಪಡೆದುಕೊಂಡ ತರುವಾಯ, ಅವರು, 2010ನೇ ವರ್ಷದಲ್ಲಿ, ತಹಸೀಲ್ದ್ದಾರ್, ಪಿರಿಯಾಪಟ್ಟಣ ಕಛೇರಿಯಿಂದ ಆದೇಶವನ್ನು ಪಡೆದುಕೊಳ್ಳಲು ಸಮರ್ಥರಾಗಿದ್ದಾರೆ ಮತ್ತು ಎಲ್ಲಾ ಪತ್ರಗಳನ್ನು ದಾಖಲಿಸಿದ ತರುವಾಯ, ಜಿಲ್ಲಾ ನ್ಯಾಯಾಲಯ, ಮೈಸೂರು ಇವರ ಮುಂದೆ ಅಪೀಲನ್ನು ದಾಖಲು ಮಾಡಿದ್ದಾರೆ ಮತ್ತು ಅಪೀಲುದಾರ 2ನೇ ಅರ್ಜಿದಾರ ಸಿದ್ದರಾಮಯ್ಯ, ಆರೋಗ್ಯವಾಗಿರುವುದಿಲ್ಲ ಮತ್ತು ಆತನು, ಕ್ಷಯರೋಗದಿಂದ ಬಳಲುತ್ತಿರುವುದರಿಂದ, ಈ ಅಪೀಲನ್ನು ದಾಖಲಿಸಲು ವಿಳಂಬವಾಗಿದೆಯೆಂದು ಸಹ ವಾದಿಸಲಾಗಿದೆ.

3. ಮಾನ್ಯ 2ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು, ಮೈಸೂರು ಇವರು ಉಭಯ ಪಕ್ಷಕಾರರ ಅಹವಾಲನ್ನು ಆಲಿಸಿದ ತರುವಾಯ, ದಿನಾಂಕ 03.10.2015ರ ಪ್ರಶ್ನಿತ ಆದೇಶ ಮೂಲಕ, ಪ್ರಮುಖವಾಗಿ 13 ವರ್ಷಗಳ ಮಿತಿಮೀರಿದ ವಿಳಂಬವಾಗಿದೆಯೆನ್ನುವ ಕಾರಣದ ಮೇಲೆ ಈ ಅಪೀಲನ್ನು ವಜಾಗೊಳಿಸಿದ್ದಾರೆ. ಹಾಗಾಗಿ, ಪ್ರಸ್ತುತ ರಿಟ್ ಅರ್ಜಿಗಳನ್ನು ದಾಖಲು ಮಾಡಲಾಗಿದೆ.

4. ದಿನಾಂಕ 28.06.1999 ರಂದು ತಹಸೀಲ್ದಾರರಿಂದ ಮಾಡಿದ ಪ್ರಶ್ನಿತ ಆದೇಶವು, ಡಿಸೆಂಬರ್ 2010ನೇ ತಿಂಗಳಲ್ಲಿ ಮಾತ್ರ ಪ್ರಸ್ತುತ ಅರ್ಜಿದಾರರ ಗಮನಕ್ಕೆ ಬಂದಿದೆಯೆಂದು ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯಾದ ಶ್ರೀಮತಿ ಮಂಜುಳರವರು ಭಾವಾವೇಶವಾಗಿ ವಾದಿಸಿದ್ದಾರೆ.

ತದನಂತರ, ಅವರು, ದೃಢೀಕೃತ ಪ್ರತಿಗಳಿಗಾಗಿ ಸಲ್ಲಿಸಿದ್ದಾರೆ ಮತ್ತು ಅಗತ್ಯ ಪ್ರತಿಗಳನ್ನು ಪಡೆದುಕೊಂಡ ತರುವಾಯ, ಅವರು, ಎಂ.ಎ. ಸಂ.27/2011ರಲ್ಲಿ ಜಿಲ್ಲಾ ನ್ಯಾಯಾಧೀಶರು, ಮೈಸೂರು ಇವರ ಮುಂದೆ ಅಪೀಲನ್ನು ದಾಖಲು ಮಾಡಿದ್ದಾರೆ. ಅಪೀಲನ್ನು, ತಿಳುವಳಿಕೆ ದಿನಾಂಕದಿಂದ ಸಮಯದೊಳಗೆ ದಾಖಲಿಸಲಾಗಿದೆ. ನಿರುಪಾಧಿಕವಾಗಿ ವಿಳಂಬಮಾಡಿರುವುದಿಲ್ಲ. ವಿಳಂಬದ ಕಾರಣದ ಮೇಲೆ ಅಪೀಲನ್ನು ವಜಾಗೊಳಿಸಿದ 2ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು, ಮೈಸೂರು ಇವರಿಂದ ಮಾಡಿದ ಪ್ರಶ್ನಿತ ಆದೇಶವು ತಪ್ಪಾದುದಾಗಿದೆ. ಹಾಗೂ ಈ ಪ್ರಕರಣದ ಕಾನೂನು ಮತ್ತು ಸಂಗತಿಗಳಿಗೆ ವಿರುದ್ಧವಾಗಿದೆಯೆಂದು ಆಕೆಯು ವಾದಿಸಿದ್ದಾರೆ.

5. ನಿಶಾನೆ ಎ.1 ರಿಂದ 7, ಎರಡನೇ ಅರ್ಜಿದಾರ ಸಿದ್ಧರಾಮಯ್ಯ, ಟಿ.ಬಿ. ರೋಗದಿಂದ ಬಳಲುತ್ತಿದ್ದನು ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತಿದ್ದರೂ ಸಹಾ ಅದನ್ನು ಜಿಲ್ಲಾ ನ್ಯಾಯಾಧೀಶರು ವಿವೇಚಿಸಿಲ್ಲವೆಂದು ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಮುಂದುವರೆದು ವಾದಿಸಿದ್ದಾರೆ. ಮಾನ್ಯ ಜಿಲ್ಲಾ ನ್ಯಾಯಾಧೀಶರು, ಸರ್ವೆ ನಂ.71 ಮತ್ತು 72ರ ಸಂಬಂಧದಲ್ಲಿ ದಾಖಲೆಯು ಲಭ್ಯವಿಲ್ಲವೆಂಬುದನ್ನು ಪರಿಗಣಿಸಿಲ್ಲವೆಂದು ಮತ್ತು ತಹಸೀಲ್ದಾರ್, ಪಿರಿಯಾಪಟ್ಟಣ ಸಹಾ ಇವರ ಮುಂದೆ ದೃಢೀಕೃತ ಪ್ರತಿಗಳಿಗಾಗಿ ಅರ್ಜಿ ಸಲ್ಲಿಸಿದ್ದರೂ ಅವರು, ದಿನಾಂಕ 23.06.2010 ಮತ್ತು 30.04.2010 ರಂದು ಹಿಂಬರಹ ನೀಡಿರುವುದನ್ನು ಗಮನಿಸಿಲ್ಲವೆಂದು ಆಕೆಯು ಮುಂದುವರೆದು ವಾದಿಸಿದ್ದಾರೆ. ತದನಂತರ ಅವರು, ದೃಢೀಕೃತ ಪ್ರತಿಗಳಿಗಾಗಿ ಅರ್ಜಿ ಸಲ್ಲಿಸಿದ್ದಾರೆ ಮತ್ತು ಪಡೆದುಕೊಂಡಿದ್ದಾರೆ ಹಾಗೂ ತಿಳುವಳಿಕೆಯ ದಿನಾಂಕದಿಂದ ಆ ಸಮಯದೊಳಗೆ ಜಿಲ್ಲಾ ನ್ಯಾಯಾಲಯದ ಮುಂದೆ ಅಪೀಲನ್ನು ಸಲ್ಲಿಸಿದ್ದಾರೆ. ಜಿಲ್ಲಾ ನ್ಯಾಯಾಧೀಶರು, ವಿಳಂಬದ ಕಾರಣದ ಮೇಲೆ ಮಾತ್ರ ಗುಣಾವಗುಣಗಳನ್ನು ಪರಿಗಣನೆಗೆ ತೆಗೆದುಕೊಳ್ಳದೇ ಅಪೀಲನ್ನು ವಜಾಗೊಳಿಸಿದ್ದಾರೆ. ಆದ್ದರಿಂದ, 2ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು, ಮೈಸೂರು ಇವರಿಂದ ಮಾಡಿದ ಆದೇಶವನ್ನು ರದ್ದುಪಡಿಸುವ ಮೂಲಕ ರಿಟ್ ಅರ್ಜಿಗಳನ್ನು ಅಂಗೀಕರಿಸುವಂತೆ ಆಕೆಯು ಕೋರಿದ್ದಾರೆ.

6. ತನ್ನ ವಾದಗಳಿಗೆ ಪೂರಕವಾಗಿ, ಆಕೆಯು, ಎಸ್‌ಎಲ್‌ಪಿಯನ್ನು ದಾಖಲು ಮಾಡಲು 679 ದಿನಗಳ ಮಿತಿಮೀರಿದ ವಿಳಂಬವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯ ಮನ್ನಾ ಮಾಡಿದೆಯೆಂಬುದನ್ನು ವರದಿ ಮಾಡಿದ ***ಬಿಹಾರ್ ಸರ್ಕಾರ ಮತ್ತು ಇತರರು –ವಿರುದ್ಧ– ಕಾಮೇಶ್ವರ ಪ್ರಸಾದ್ ಸಿಂಗ್ ಮತ್ತು ಇನ್ನೊಬ್ಬರು*** [1] ಪ್ರಕರಣದಲ್ಲಿ ಹೇಳಿರುವುದನ್ನು ಉಲ್ಲೇಖಿಸಿದ್ದಾರೆ. ಸಮಯದೊಳಗೆ ನ್ಯಾಯಾಲಯ ಶುಲ್ಕವನ್ನು ಸಂದಾಯ ಮಾಡದೇ ಇರುವ ಮಿತಿಮೀರಿದ ವಿಳಂಬವನ್ನು ಮನ್ನಾ ಮಾಡಿದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ***ಮನೋಹರನ್ –ವಿರುದ್ಧ– ಶಿವರಾಜನ್ ಮತ್ತು ಇತರರು*** [2], ಪ್ರಕರಣವನ್ನು ಸಹಾ ಆಕೆಯು ಅವಲಂಬಿಸಿದ್ದಾಳೆ.

7. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಒತ್ತಿ ಹೇಳಿದ ಈ ಹಿಂದಿನ ವಾದಗಳ ದೃಷ್ಟಿಯಿಂದ, ಈ ರಿಟ್ ಅರ್ಜಿಗಳಲ್ಲಿ ಪರಿಗಣನೆಗಾಗಿ ಉದ್ಭವಿಸಿದ ಒಂದೇ ಅಂಶವೇನೆಂದರೆ:

> ***"2ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು, ಮೈಸೂರು, ಪ್ರಸ್ತುತ ಪ್ರಕರಣದ ಸಂಗತಿಗಳು ಮತ್ತು ಸಂದರ್ಭಗಳಲ್ಲಿ ಅಪೀಲನ್ನು ದಾಖಲು ಮಾಡಲು 13 ವರ್ಷಗಳ ಮಿತಿಮೀರಿದ ವಿಳಂಬ ಮನ್ನಾ ಮಾಡುವ ಕಾರಣದ ಮೇಲೆ ಮಾತ್ರ ಎಂ.ಎ. ಸಂ.27/2011ರಲ್ಲಿ ಅಪೀಲನ್ನು ವಜಾಗೊಳಿಸಿರುವುದು ನ್ಯಾಯ ಸಮ್ಮತವಾಗಿದೆಯೇ?"***

8. ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಮಂಡಿಸಿದ ವಾದಗಳನ್ನು ನಾನು ವಿಚಾರ ಪೂರ್ಣವಾಗಿ ಪರಿಗಣಿಸಿದ್ದೇನೆ ಮತ್ತು ಎಚ್ಚರಿಕೆಯಿಂದ ದಾಖಲೆ ಮೇಲಿನ ಇಡೀ ಸಾಮಗ್ರಿಯನ್ನು ಪರಿಶೀಲಿಸಲಾಗಿದೆ.

1. (2000) 9 ಎಸ್‌ಸಿಸಿ 94

2. (2014) 4 ಎಸ್‌ಸಿಸಿ 163

9. ಎಂ. ಶೆಟ್ಟಿಹಳ್ಳಿ ಗ್ರಾಮ ರಾವಂದೂರು ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕು ಸರ್ವೆ ನಂ.71 ಮತ್ತು 72 ರಲ್ಲಿರುವ ಭೂಮಿಗಳು ಇನಾಮ್ ಭೂಮಿಗಳೆಂಬ ಸಂಗತಿ ವಿವಾದಿತವಲ್ಲ. ಕರ್ನಾಟಕ ಗ್ರಾಮ ಕಛೇರಿಗಳ ರದ್ದಿಯಾತಿ ಅಧಿನಿಯಮ, 1961ರ ಉಪಬಂಧಗಳ ಅಡಿಯಲ್ಲಿ, ಒಳಗೊಂಡಿರುವುದನ್ನು ವಿವರವಾದ ವಿಚಾರಣೆ ನಡೆಸಿದ ತರುವಾಯ ತಹಸೀಲ್ದಾರರು, ದಿನಾಂಕ 28.06.1999ರ ಆದೇಶದ ಮೂಲಕ ಸದರಿ ಭೂಮಿಗಳ ಸಂಬಂಧ ಅಧಿಭೋಗದಲ್ಲಿರುವವರ ಪ್ರಕಾರ ಜಂಟಿಯಾಗಿ ಪ್ರಸ್ತುತ ಅರ್ಜಿದಾರರು ಸೇರಿದಂತೆ 1 ರಿಂದ 17ರ ವರೆಗಿನ ಪ್ರತ್ಯರ್ಜಿದಾರರ ಹೆಸರಿನಲ್ಲಿ ಆ ಭೂಮಿಗಳನ್ನು ಮರುಮಂಜೂರು ಮಾಡಿದ್ದಾರೆ. ಅದೇ ದಿನದಂದು, ತಹಸೀಲ್ದಾರರು, ಅರ್ಜಿದಾರರು ಸೇರಿದಂತೆ ಎಲ್ಲಾ ಮಂಜೂರಾತಿದಾರರಿಗೆ ಮರುಮಂಜೂರಾತಿ ಪ್ರತಿಯನ್ನು ಕಳುಹಿಸಿದ್ದಾರೆ ಮತ್ತು ಮಾಹಿತಿಗಾಗಿ, ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳಿಗೆ ಸಹ ಆ ಪ್ರತಿಗಳನ್ನು ಕಳುಹಿಸಿದ್ದಾರೆ.

10. ಜಿಲ್ಲಾ ನ್ಯಾಯಾಲಯದ ಮುಂದೆ, ಮಿತಿಮೀರಿದ ವಿಳಂಬವನ್ನು ಮನ್ನಾ ಮಾಡಲು ಸಲ್ಲಿಸಿದ ಅರ್ಜಿಯಲ್ಲಿ, ಡಿಸೆಂಬರ್ 2010ರ ತಿಂಗಳಲ್ಲಿ ಮಾತ್ರ ತಹಸೀಲ್ದಾರರಿಂದ ಮಾಡಿದ ಆದೇಶದ ಬಗ್ಗೆ ಅವನು ತಿಳಿದು ಕೊಂಡಿದ್ದಾನೆ ಮತ್ತು ಅವನು ಟಿ.ಬಿ. ಕಾಯಿಲೆಯಿಂದ ಬಳಲುತ್ತಿದ್ದು, ಅವನು ಸಮಯದೊಳಗೆ ಅಪೀಲನ್ನು ದಾಖಲು ಮಾಡಿರುವುದಿಲ್ಲವೆಂಬ ಸಂಗತಿಯ ಶಪಥ ಪತ್ರವನ್ನು, ಅರ್ಜಿಯ ಜೊತೆಗೆ ಸೇರಿಸಿದ್ದು, ಎಲ್ಲಾ ಅರ್ಜಿದಾರರು ಮತ್ತು ಪ್ರತ್ಯರ್ಜಿದಾರರಿಗೆ ಜಂಟಿಯಾಗಿ 1999ನೇ ವರ್ಷದಲ್ಲಿ ಮರು ಮಂಜೂರಾತಿ ಆದೇಶ ಮಾಡಿರುವುದು ಆಗಿರುವುದರ ಬಗ್ಗೆ ಏನನ್ನೂ ಹೇಳಿರುವುದಿಲ್ಲ. ಸದರಿ ಆದೇಶಕ್ಕನುಸಾರವಾಗಿ, ಪಕ್ಷಕಾರರು, ಪ್ರಸ್ತುತ ಅರ್ಜಿದಾರರು ಸೇರಿದಂತೆ ಅವರ ಹೆಸರಿನಲ್ಲಿ ಕಂದಾಯ ದಾಖಲೆಗಳಿರತಕ್ಕದ್ದು. ಅವರು, ತಹಸೀಲ್ದಾರರಿಂದ ಮಾಡಿದ ಮರು ಮಂಜೂರಾತಿ ಆದೇಶದ ಆಧಾರದ ಮೇಲೆ ಕಂದಾಯ ದಾಖಲೆಗಳಲ್ಲಿ ನಮೂದುಗಳ ಬಗ್ಗೆ ಕುರಿತಂತೆ ಏನನ್ನೂ ಮಾತನಾಡಿರುವುದಿಲ್ಲ. ಎರಡನೇ ಅರ್ಜಿದಾರ ಸಿದ್ಧರಾಮಯ್ಯ ಆರೋಗ್ಯ ಚೆನ್ನಾಗಿಲ್ಲವೆಂದು ಭಾವಿಸಿದರೂ ಮತ್ತು ಟಿ.ಬಿ. ಕಾಯಿಲೆಯಿಂದ

ಬಳಲುತ್ತಿದ್ದರೆಂದು ಭಾವಿಸಿದರೂ, ನಿಗದಿತ ಸಮಯದೊಳಗೆ ಅಪೀಲನ್ನು ದಾಖಲು ಮಾಡಲು ಇತರೇ ಅರ್ಜಿದಾರರು ಏಕೆ ಮುಂದೆ ಬಂದಿರುವುದಿಲ್ಲ. ಎಲ್ಲರೂ ಜಂಟಿಯಾಗಿ ವಕಾಲತ್ತು ನಾಮೆಗೆ ಸಹಿ ಮಾಡಿದ್ದಾರೆ ಮತ್ತು ಅಪೀಲನ್ನು ದಾಖಲು ಮಾಡಿದ್ದಾರೆಂಬುದು ದಾಖಲೆ ಮೇಲಿನ ಸಾಮಾಗ್ರಿಯಿಂದ ಸ್ಪಷ್ಟವಾಗಿ ಕಂಡುಬರುತ್ತದೆ. 13 ವರ್ಷಗಳ ಮಿತಿಮೀರಿದ ವಿಳಂಬವನ್ನು ಮನ್ನಾ ಮಾಡಲು ಯುಕ್ತ ವಿವರದ ಕೊರತೆಯಿಂದ ವಿಳಂಬವನ್ನು, ಮನ್ನಾ ಮಾಡಬಹುದಾಗಿದೆಯೆಂಬ ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯ ವಾದವನ್ನು ಅಂಗೀಕರಿಸಲು ಅದು ಸಾಧ್ಯವಾಗದು ಮತ್ತು ಈ ನ್ಯಾಯಾಲಯ, ಪಕ್ಷಕಾರರ ಹಕ್ಕುಗಳನ್ನು ಒಳಗೊಂಡಂತೆ ತಾಂತ್ರಿಕತೆಗಳ ಮೇಲೆ ಈ ಪ್ರಕರಣವನ್ನು ವಜಾಗೊಳಿಸತಕ್ಕದ್ದಲ್ಲ.

11. ಪ್ರತ್ಯರ್ಜಿದಾರರು, ಜಿಲ್ಲಾ ನ್ಯಾಯಾಲಯದ ಮುಂದೆ ಆಕ್ಷೇಪಣೆಗಳನ್ನು ದಾಖಲು ಮಾಡಿದ್ದಾರೆ ಮತ್ತು ತಹಸೀಲ್ದಾರರು, ಸರ್ಕಾರವು ದಿನಾಂಕ 04.01.1997ರ ಮೂಲಕ ಹೊರಡಿಸಲಾದ ಸುತ್ತೋಲೆಯನ್ನು ಪರಿಗಣಿಸಿದ ತರುವಾಯ, ಜಿಲ್ಲಾಧಿಕಾರಿಗಳಿಂದ ವರದಿ ಪಡೆದುಕೊಂಡಿದ್ದಾರೆ ಮತ್ತು ಉಪವಿಭಾಗಾಧಿಕಾರಿಗಳಿಂದ ಸಹ ಅನುಮತಿ ಪಡೆದುಕೊಂಡಿದ್ದಾರೆ ಹಾಗೂ ದಿನಾಂಕ 28.06.1996ರ ಆದೇಶದ ಮೂಲಕ ದೇವಯ್ಯ, ಪುಟ್ಟಯ್ಯ, ಸಿದ್ಧಯ್ಯ ಮತ್ತು ಬಿಲ್ಲಯ್ಯರ ಮಕ್ಕಳ ಹೆಸರಿನಲ್ಲಿ ಪ್ರಶ್ನಿತ ಭೂಮಿಗಳನ್ನು ಮರು ಮಂಜೂರು ಮಾಡಿದ್ದಾರೆ ಮತ್ತು ಪಕ್ಷಕಾರರು, ಸರ್ಕಾರಕ್ಕೆ ಪ್ರೀಮಿಯಮ್ ಸಂದಾಯ ಮಾಡುವಂತೆ ನಿರ್ದೇಶಿಸಲಾಗಿದೆಯೆಂದು ನಿರ್ದಿಷ್ಟವಾಗಿ ವಾದಿಸಿದ್ದಾರೆ. ಅದಕ್ಕನುಸಾರವಾಗಿ, ವ್ಯವಹರಣೆಯ ಪಕ್ಷಕಾರರು, ಪ್ರೀಮಿಯಮ್ ಸಂದಾಯ ಮಾಡಿದ್ದಾರೆ ಮತ್ತು ಅದಕ್ಕನುಸಾರವಾಗಿ ಖಾತಾ ನೋಂದಣಿ ಮಾಡಲಾಗಿದೆ. ತಹಸೀಲ್ದಾರರ ಮೂಲಕ ಪ್ರಶ್ನಿತ ಆದೇಶವನ್ನು ಮಾಡಿರುವುದರ ತಿಳುವಳಿಕೆಯೊಂದಿಗೆ, ಅರ್ಜಿದಾರರು/ಅಪೀಲುದಾರರು ಮತ್ತು ಅರ್ಜಿದಾರರು ಮತ್ತು ಪ್ರತ್ಯರ್ಜಿದಾರರು ಪ್ರತ್ಯೇಕವಾಗಿ 1999ನೇ ವರ್ಷದಿಂದ ತೆರಿಗೆಗಳನ್ನು ಪಾವತಿಸುವುದರ ಮೂಲಕ ಆ ಭೂಮಿಗಳನ್ನು ಬೇಸಾಯ ಮಾಡುತ್ತಿದ್ದಾರೆಂದು ಮುಂದುವರೆದು ವಾದಿಸಿದ್ದಾರೆ. ಹಾಗೆಯೇ, ಅವರು,

ತಹಸೀಲ್ದಾರ್‌ರಿಂದ ಮಾಡಿದ ಆದೇಶಗಳ ಬಗ್ಗೆ ತಿಳಿದಿರುವುದಿಲ್ಲವೆಂಬುದು ಸಮರ್ಥನೀಯವಲ್ಲದ ವಾದವಾಗಿದೆ. ಅರ್ಜಿದಾರರು, ತಮಗೆ ತಿಳಿದಿರುವುದಿಲ್ಲವೆಂದು ತೋರಿಸುವುದಕ್ಕೆ ಮಾತ್ರ ತಹಸೀಲ್‌ದ್ದಾರ್‌ರಿಂದ ಪಡೆದುಕೊಂಡ ಹಿಂಬರಹಗಳನ್ನು ಹಾಜರುಪಡಿಸಿದ್ದಾರೆ ಮತ್ತು ಅವರು, ಸದರಿ ಹಿಂಬರಹಗಳನ್ನು ಸೃಷ್ಟಿಸಿದ್ದಾರೆ ಹಾಗೂ ಎರಡನೇ ಅರ್ಜಿದಾರನು, ಅನಾರೋಗ್ಯದಿಂದ ಬಳಲುತ್ತಿದ್ದಾನೆಂಬುದನ್ನು ಸಹ ಅಲ್ಲಗೆಳೆದಿದ್ದಾರೆ.

12. ದಾಖಲೆ ಮೇಲಿನ ಇಡೀ ಸಾಮಾಗ್ರಿಯನ್ನು ಪರಿಗಣಿಸಿ, ಮಾನ್ಯ 2ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು, ಮೈಸೂರು, ಅಪೀಲುದಾರರ ಪ್ರಕಾರ, ಎರಡನೇ ಅಪೀಲುದಾರನು, ಟಿ.ಬಿ. ಕಾಯಿಲೆಯಿಂದ ಬಳಲುತ್ತಿದ್ದನು ಹಾಗೆಯೇ ಅವನು, ಸಕಾಲದಲ್ಲಿ ನ್ಯಾಯಾಲಯವನ್ನು ಸಮೀಪಿಸಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಪಾಟೀ ಸವಾಲಿನಲ್ಲಿ, ಎರಡನೇ ಅಪೀಲುದಾರನು, ಮೊದಲನೇ ಅಪೀಲುದಾರನು, 2001ನೇ ವರ್ಷದಲ್ಲಿ ಬಹಳ ಹಿಂದೆಯೇ ಪ್ರಶ್ನಿತ ಆದೇಶದ ದೃಢೀಕೃತ ಪ್ರತಿಯನ್ನು ಪಡೆದುಕೊಂಡಿದ್ದಾನೆ ಮತ್ತು 2001ನೇ ವರ್ಷದಲ್ಲಿ ಈ ದಾಖಲೆಯನ್ನು ಪಡೆದುಕೊಂಡಿದ್ದರೂ ಸಹ, ಅಪೀಲುದಾರನು, ಸೂಚಿಸಿದ ಯಾವುದೇ ಸಮಯದಲ್ಲಿ ಪ್ರಶ್ನಿತ ಆದೇಶವನ್ನು ಪ್ರಶ್ನಿಸಿರುವುದಿಲ್ಲವೆಂಬುದನ್ನು ಒಪ್ಪಿಕೊಳ್ಳಲಾಗಿದೆ. ಎರಡನೇ ಅಪೀಲುದಾರನು ಹಾಜರುಪಡಿಸಿದ ವೈದ್ಯಕೀಯ ದಾಖಲೆಗಳಿಗೆ ಸಂಬಂಧಪಟ್ಟಂತೆ, ಎರಡನೇ ಅಪೀಲುದಾರನು ಅನಾರೋಗ್ಯಪೀಡಿತನಾಗಿದ್ದು, ಈ ಅಪೀಲನ್ನು ಹೂಡುವುದಕ್ಕೆ ತೊಂದರೆಯಾಗುವಷ್ಟು ಅಪೀಲುದಾರರಿಗಾಗಿ ಕಷ್ಟವಿರಲಿಲ್ಲವೆಂದು ಮತ್ತು 2001ನೇ ವರ್ಷದಲ್ಲಿ ಪಡೆದುಕೊಂಡ ಪ್ರಶ್ನಿತ ಆದೇಶದ ದೃಢೀಕೃತ ಪ್ರತಿ, ಕಳೆದುಹೋಗಿದೆಂಬೆಂಬ ಕಾರಣವು, ಅಪೀಲುದಾರರು, ಶ್ರದ್ಧಾಯುಕ್ತರಾಗಿರುವುದಿಲ್ಲವೆಂದು ತೋರಿಸುತ್ತದೆಯೆಂದು ಜಿಲ್ಲಾ ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ. ವ್ಯವಹರಣೆಗಳನ್ನು ವಿಳಂಬಗೊಳಿಸಲು ಅವರು ಯಾವಾಗಲೂ ಇಚ್ಛಿಸಿದ್ದಾರೆ, ಆದರೂ 13 ವರ್ಷಗಳ ಮಿತಿ ಮೀರಿದ ವಿಳಂಬವಾಗಿದೆಯೆನ್ನುವ ಕಾರಣದ ಮೇಲೆ ಈ ಅಪೀಲನ್ನು ಅಂತಿಮವಾಗಿ ವಜಾಗೊಳಿಸಲಾಗಿದೆ.

13. ಮರು ಮಂಜೂರಾತಿಯನ್ನು ಜಂಟಿಯಾಗಿ ಪ್ರಸ್ತುತ ಅರ್ಜಿದಾರರು ಮತ್ತು ಪ್ರತ್ಯರ್ಜಿದಾರರ ಹೆಸರಿನಲ್ಲಿ ಮಾಡಲಾಗಿದೆಯೆಂಬುದು ವಿವಾದಿತವಲ್ಲವೆಂಬುದು ಉಳಿದಿರುವ ಸಂಗತಿಯಾಗಿದೆ. 1999ನೇ ವರ್ಷದಲ್ಲಿ ತಹಸೀಲ್ದಾರರಿಂದ ಮಾಡಿದ ಮರು ಮಂಜೂರಾತಿ ಆದೇಶವನ್ನು ಅರ್ಜಿದಾರರು ಸೇರಿದಂತೆ ತಹಸೀಲ್ದಾರರಿಂದ ಮಾಡಿದ ಮರು ಮಂಜೂರಾತಿ ಆದೇಶದ ನಿಬಂಧನೆಗಳಲ್ಲಿರುವಂತೆ ಸಂಬಂಧಪಟ್ಟ ಅರ್ಜಿದಾರರ ಹೆಸರುಗಳನ್ನು ನಮೂದಿಸಲಾಗಿದೆಯೆಂಬುದು ಸಹ ವಿವಾದಿತವಾಗಿರುವುದಿಲ್ಲ.

14. ಅರ್ಜಿದಾರರಿಗೆ ಸಂಪೂರ್ಣವಾಗಿ ಗೊತ್ತಿದ್ದು, 13 ವರ್ಷಗಳಿಗಿಂತ ಹೆಚ್ಚಾಗಿದ್ದರೂ ಯಾವುದೇ ಅಪೀಲನ್ನು ದಾಖಲು ಮಾಡಿರುವುದಿಲ್ಲ ಮತ್ತು ನಿರುಪಾಧಿಕವಾಗಿ ವಿಳಂಬಕ್ಕಾಗಿ ಯಾವುದೇ ಕಾರಣವನ್ನು ನೀಡಿರುವುದಿಲ್ಲ. ಯಾವುದೇ ವಿವರದ ಕೊರತೆಯಿಂದ, ವಿಳಂಬವನ್ನು, ಉದಾರ ಮನವಿಯೊಂದಿಗೆ ಮನ್ನಾ ಮಾಡಬಹುದುದೆಂಬ ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯ ವಾದವನ್ನು ಅಂಗೀಕರಿಸಲಾಗದು.

15. ಈ ನ್ಯಾಯಾಲಯ, ***ಕಲೆಕ್ಟರ್ ಭೂಸ್ವಾಧೀನ –ವಿರುದ್ಧ– ಕಾಟಜಿ ಮತ್ತು ಇತರರು*** [3] ಪ್ರಕರಣದಲ್ಲಿ ವಿಳಂಬವನ್ನು ಪರಿಗಣಿಸುವಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯ, ವಿಳಂಬವನ್ನು ಮನ್ನಾ ಮಾಡುವ ನಿಯಮವನ್ನು ಹೇಳಲಾಗಿದೆಯೆಂಬ ಸಂಗತಿಯನ್ನು ತಿಳಿದುಕೊಳ್ಳಲಾಗಿದೆ ಮತ್ತು ಈ ನ್ಯಾಯಾಲಯ, ಸಾಕಷ್ಟು ಕಾರಣ ತೋರಿದ ಪ್ರಕರಣದಲ್ಲಿ ಮಾತ್ರ ವಿಳಂಬವನ್ನು ಮನ್ನಾ ಮಾಡಲು ಉದಾರವಾಗಿರತಕ್ಕದೆಂದು ಅಂತಿಮವಾಗಿ ಅಭಿಪ್ರಾಯಪಟ್ಟಿದೆ.

16. ಒಪ್ಪಿತವಾದಂತೆ, ಪ್ರಸ್ತುತ ಪ್ರಕರಣದಲ್ಲಿ, ತಹಸೀಲ್ದಾರ್‌ರಿಂದ ಮರು ಮಂಜೂರಾತಿ ವ್ಯವಹರಣೆಗಳ ಸಂಬಂಧದಲ್ಲಿ ಇತರೇ ಪಕ್ಷಕಾರರ ಹಕ್ಕುಗಳು, ಒಳಗೊಂಡಿವೆಯೆಂದು ತಿಳಿದಿದ್ದರೂ ಸಹಾ ಯಾವುದೇ ಕಾರಣವಿಲ್ಲದೇ

3. (1987) 2 ಎಸ್‌ಸಿಸಿ 107

13 ವರ್ಷಗಳ ಅವಧಿಯಲ್ಲಿ ನಿರಾಂತಕವಾಗಿದ್ದು 2011ನೇ ವರ್ಷದಲ್ಲಿ ಇದ್ದಕ್ಕಿದ್ದಂತೆ ಎಚ್ಚೆತ್ತುಕೊಂಡು ಈ ಅಪೀಲನ್ನು ದಾಖಲು ಮಾಡಿದ್ದಾರೆ. ವಿಳಂಬವನ್ನು ಮನ್ನಾ ಮಾಡಲು ಯಾವುದೇ ಸ್ಪಷ್ಟ ಕಾರಣಗಳನ್ನು ನೀಡಿರುವುದಿಲ್ಲ. ಆದ್ದರಿಂದ, ***ಬಿಹಾರ ಸರ್ಕಾರ ಮತ್ತು ಇತರರು, –ವಿರುದ್ಧ– ಕಾಮೇಶ್ವರ ಪ್ರಸಾದ್ ಸಿಂಗ್ ಮತ್ತು ಇನ್ನೊಬ್ಬರು (ಮೇಲಿನ)*** ಪ್ರಕರಣದಲ್ಲಿ ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಈ ತೀರ್ಪಿನ ಮೇಲೆ ಅವಲಂಬಿಸಿದ್ದು, ಇದು ಸೇವೆಗೆ (ಜ್ಯೇಷ್ಠತೆ) ಸಂಬಂಧಿಸಿದಂತೆ ಇರುವ ವಿಷಯವಾಗಿದ್ದು ಅದನ್ನು ನಿರ್ಧರಿಸಿರುವಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಭಾರತ ಸಂವಿಧಾನದ 136ನೇ ಅನುಚ್ಛೇಧದ ಅಧಿಕಾರಗಳನ್ನು ಚಲಾಯಿಸಿ 679 ದಿನಗಳ ಮಿತಿ ಮೀರಿದ ವಿಳಂಬವನ್ನು ಮನ್ನಾ ಮಾಡಿರುವುದು ಪ್ರಸ್ತುತ ಪ್ರಕರಣದ ಸಂಗತಿಗಳು ಮತ್ತು ಸಂದರ್ಭಗಳಿಗೆ ಅನ್ವಯಿಸುವುದಿಲ್ಲ.

17. ***ಮನೋಹರನ್–ವಿರುದ್ಧ–ಶಿವರಾಜನ್ ಮತ್ತು ಇತರರು (ಮೇಲಿನ)*** ಪ್ರಕರಣದಲ್ಲಿ ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಇತರೇ ತೀರ್ಪಿನ ಮೇಲೆ ಅವಲಂಬಿಸಿದಷ್ಟರ ಮಟ್ಟಿಗೆ, ಈ ಪ್ರಕರಣ ಅಪೀಲುದಾರನಿಗೆ ಸಾಕಷ್ಟು ಸಮಯ ನೀಡಿದ್ದರೂ, ಸಮಯದೊಳಗೆ ನ್ಯಾಯಾಲಯ ಶುಲ್ಕ ಸಂದಾಯ ಮಾಡದೇ ಇರುವುದರಿಂದ ದಾವೆಯನ್ನು ವಜಾಗೊಳಿಸಿರುವುದಾಗಿರುತ್ತದೆ. ಆದ್ದರಿಂದ, ಆ ಸಂದರ್ಭಗಳಲ್ಲಿ, ಕೇವಲ ಸಮಯದೊಳಗೆ ನ್ಯಾಯಾಲಯ ಶುಲ್ಕವನ್ನು ಸಂದಾಯ ಮಾಡದೇ ಇರುವುದರಿಂದ, ನ್ಯಾಯಾಲಯ, ದಾವೆಯನ್ನು ವಜಾಗೊಳಿಸತಕ್ಕದ್ದಲ್ಲ ಮತ್ತು ನ್ಯಾಯಾಲಯ ಶುಲ್ಕವನ್ನು 8 ವಾರಗಳೊಳಗೆ ಸಂದಾಯ ಮಾಡತಕ್ಕದ್ದು, ಆದರೆ ಅವನು ಎಂಟು ವಾರಗಳ ತರುವಾಯ ಸಂದಾಯ ಮಾಡಿದ್ದಾನೆಂದು ಮಾನ್ಯ ಸರ್ವೋಚ್ಛ ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಆದ್ದರಿಂದ, ಸದರಿ ಸಂದರ್ಭಗಳ ಮೇರೆಗೆ, ಮಾನ್ಯ ಸರ್ವೋಚ್ಛ ನ್ಯಾಯಾಲಯ, ವಿಳಂಬವನ್ನು ಮನ್ನಾ ಮಾಡಿದೆ. ಸದರಿ ಪ್ರಕರಣದ ಸಂಗತಿಗಳು ಮತ್ತು ಪ್ರಸ್ತುತ ಪ್ರಕರಣದ ಸಂಗತಿಗಳು, ಸಂಪೂರ್ಣವಾಗಿ ವಿಭಿನ್ನವಾಗಿದ್ದು, ಸದರಿ ಪ್ರಕರಣದಲ್ಲಿ ಅದರಲ್ಲಿರುವಂತೆ, ಅಪೀಲುದಾರನು ವಿಳಂಬವನ್ನು ವಿವರಿಸಿದ್ದಾನೆ ಮತ್ತು ಸಾಕಷ್ಟು ಕಾರಣ ನೀಡಿದ್ದಾನೆ. ಹಾಗಾಗಿ ಮಾನ್ಯ ಸರ್ವೋಚ್ಛ ನ್ಯಾಯಾಲಯ, ವಿಳಂಬವನ್ನು ಮನ್ನಾ ಮಾಡಿದೆ.

18. ಪ್ರಸ್ತುತ ಪ್ರಕರಣದಲ್ಲಿ ಒಪ್ಪಿಕೊಳ್ಳಲಾದಂತೆ ಅಪೀಲುದಾರರು ನಿಗದಿಪಡಿಸಿದ 90 ದಿನಗಳ ಅಪೀಲು ಸಮಯದಲ್ಲಿ, ಅಪೀಲನ್ನು ದಾಖಲು ಮಾಡಲು 13 ವರ್ಷಗಳ ಮಿತಿಮೀರಿದ ವಿಳಂಬವನ್ನು ಮನ್ನಾ ಮಾಡಲು ಯಾವುದೇ ಸಾಕಷ್ಟು ಕಾರಣ ನೀಡಿರುವುದಿಲ್ಲ. 13 ವರ್ಷಗಳ ಮಿತಿಮೀರಿದ ವಿಳಂಬವನ್ನು ಮನ್ನಾ ಮಾಡುವುದಕ್ಕಾಗಿ ಜಿಲ್ಲಾ ನ್ಯಾಯಾಲಯದ ಮುಂದೆ ಸಲ್ಲಿಸಿದ ಅರ್ಜಿಯಲ್ಲಿ ಯಾವುದೇ ಸ್ಪಷ್ಟವಾದ ವಿವರ ನೀಡಿರುವುದಿಲ್ಲ. ಎಲ್ಲ ಸಾಮಾಗ್ರಿ ಸಂಗತಿಗಳನ್ನು ಪರಿಗಣಿಸಿದ್ದು, ಅರ್ಜಿದಾರರು, ಪ್ರಾಮಾಣಿಕವಾಗಿ ಈ ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಮತ್ತು ಅರ್ಜಿದಾರರು, ಅಪೀಲನ್ನು ದಾಖಲಿಸಲು 13 ವರ್ಷಗಳ ಮಿತಿಮೀರಿದ ವಿಳಂಬವನ್ನು ವಿವರಿಸದೇ ಮನ್ನಾ ಮಾಡಲು ಸ್ಪಷ್ಟವಾದ ಅಭಿಪ್ರಾಯವನ್ನು ತೆಗೆದುಕೊಳ್ಳಲು ಮೊದಲನೋಟಕ್ಕೆ ಸಮ್ಮತವಾದ ಯಾವುದೇ ವಾದ ಮಾಡಿರುವುದಿಲ್ಲವೆಂಬುದು ಸ್ಪಷ್ಟವಾಗಿದೆ.

19. ***ಎಸ್.ಎಸ್. ಬಾಲು ಮತ್ತು ಬೇರೊಬ್ಬರು –ವಿರುದ್ಧ– ಕೇರಳ ಸರ್ಕಾರ ಮತ್ತು ಇತರರು*** [4] ಪ್ಯಾರಾ 17 ಪ್ರಕರಣದಲ್ಲಿ 'ವಿಳಂಬವು ಸಮಾನ ನ್ಯಾಯವನ್ನು ವಿಫಲಗೊಳಿಸುತ್ತದೆ' ಯೆಂಬುದನ್ನು ಪರಿಗಣಿಸುವಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

> 17. ಸರ್ಕಾರಿ ಆದೇಶವನ್ನು, ದಿನಾಂಕ 15.1.2002 ರಂದು ಹೊರಡಿಸಲಾಗಿದ್ದು, *'ವಿಳಂಬವು ಸಮಾನ ನ್ಯಾಯವನ್ನು ವಿಫಲಗೊಳಿಸುತ್ತದೆ' ಯೆಂಬ ಕಾನೂನು ನಿಯಮವು ಸಹ ಸುಸ್ಥಾಪಿತವಾಗಿದೆ. ಸರ್ಕಾರಿ ಆದೇಶದವನ್ನು ದಿನಾಂಕ 15.1.2002ರಲ್ಲಿ ಹೊರಡಿಸಲಾಗಿದೆ. ಅಪೀಲುದಾರರು, ಅದರ ಕಾನೂನು ಸಮ್ಮತತೆ ಮತ್ತು ಸಿಂಧುತ್ವವನ್ನು ಪ್ರಶ್ನಿಸಿ ಯಾವುದೇ ರಿಟ್ ಅರ್ಜಿಯನ್ನು ದಾಖಲು ಮಾಡಿರುವುದಿಲ್ಲ. ಇತರರಿಂದ ದಾಖಲು ಮಾಡಿದ ರಿಟ್ ಅರ್ಜಿಗಳ ತರುವಾಯ ಮಾತ್ರ,*

4. 2009(2) ಎಸ್‌ಸಿಸಿ 479

ಅಂಗೀಕರಿಸಲಾಗಿದೆ ಮತ್ತು ಕೇರಳ ರಾಜ್ಯವು ಅವರ ವಿರುದ್ಧ ಅಪೀಲನ್ನು ಹೂಡಿದೆ. ಅವರು, ಪಕ್ಷಕಾರ ಪ್ರತ್ಯರ್ಜಿದಾರರಂತೆ ಸೇರ್ಪಡೆಗೊಂಡಿದ್ದಾರೆ. ರಿಟ್ ಅರ್ಜಿದಾರನು, ದೀರ್ಘ ವಿಳಂಬದ ತರುವಾಯ ಉಚ್ಚ ನ್ಯಾಯಾಲಯಕ್ಕೆ ಮನವಿ ಮಾಡಿದ್ದು, ಅವರು, ತೀರ್ಪಿನ ಪ್ರಯೋಜನವನ್ನು ಪಡೆದುಕೊಂಡಿರುವ ಇತರೇ ಅಭ್ಯರ್ಥಿಗಳಿಗೆ ಅಂಥದೇ ಸಂಗತಿಯನ್ನು ಲಕ್ಷಿಸದೇ ವಿಳಂಬ ಮತ್ತು ತಪ್ಪುಗಳ ಕಾರಣದ ಮೇಲೆ ಅವರಿಗೆ ನೀಡಿರುವ ಅದೇ ಬಗೆಯ ಪರಿಹಾರಗಳಿಗೆ ಮನವಿ ಮಾಡಲಾಗಿದೆ. ಹೀಗಾಗಿ, ಈ ಹಂತದಲ್ಲಿ ಅಪೀಲುದಾರರ ನೇಮಕಾತಿಗೆ ಕೇರಳ ಸರ್ಕಾರ ಅಥವಾ ಆಯೋಗಕ್ಕೆ ಯಾವುದೇ ನಿರ್ದೇಶನ ನೀಡಲು ನಮಗೆ ಸಾಧ್ಯವಾಗುವುದಿಲ್ಲ.

ನ್ಯೂಡೆಲ್ಲಿ ಮುನ್ಸಿಪಲ್ ಕೌನ್ಸಿಲ್ –ವಿರುದ್ಧ– ಪಾನ್ ಸಿಂಗ್ ಮತ್ತು ಇತರರು, (2007) 9 ಎಸ್‌ಸಿಸಿ 278ರಲ್ಲಿ, ಈ ನ್ಯಾಯಾಲಯ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"16. ವಿಷಯದ ಇನ್ನೊಂದು ದೃಷ್ಟಿಯಿಂದ ಅದನ್ನು ಗಮನಿಸದೇ ಇರಲಾಗಿ, 17 ವರ್ಷಗಳ ತರುವಾಯ ರಿಟ್ ಅರ್ಜಿಯನ್ನು ಇದರಲ್ಲಿರುವ ಪ್ರತ್ಯರ್ಜಿದಾರರು ದಾಖಲು ಮಾಡಿದ್ದಾರೆ. ಅವರು, ದೀರ್ಘಾವಧಿಯಲ್ಲಿ ತಮ್ಮ ಕುಂದುಕೊರತೆಗಳ ಪ್ರಶ್ನೆಯನ್ನು ಎತ್ತಿರುವುದಿಲ್ಲ. ಅವರು, ಇದರಲ್ಲಿ ಗಮನಿಸಿರುವಂತೆ ಈ ಮುಂಚೆ ಸಾಧ್ಯವಿರುವ ಅವಕಾಶದಂತೆ 17 ಕೆಲಸಗಾರರೊಂದಿಗೆ ಕ್ಲೇಮು ಸಮತೆಯಾಗಿರುವುದಿಲ್ಲ. ಅವರು, ಕೈಗಾರಿಕಾ ನ್ಯಾಯಾಧೀಕರಣದ ಮುಂದೆ ರಾಜ್ಯದಿಂದ ಮಾಡಿದ ಉಲ್ಲೇಖದಲ್ಲಿ ಸಹ

*ಪಕ್ಷಕಾರರಂತೆಯೂ ಸಹಾ ಸೇರ್ಪಡೆಗೊಂಡಿರುವುದಿಲ್ಲ. 1982ರ ತರುವಾಯ, ಸದರಿ ವೇತನ ಶ್ರೇಣಿಯನ್ನು ನೀಡಲಾಗಿದ್ದು, ನಿಯೋಜಿಸಲಾಗಿರುವ ಈ ನೌಕರರು ಅಥವಾ ನಿಗದಿಪಡಿಸಿರುವ ದಿನಾಂಕದ ತರುವಾಯ ಭರ್ತಿಮಾಡಿಕೊಳ್ಳಲಾಗಿದೆಯೆಂಬುದು ಸಹಾ ಅವರ ಮೊಕದ್ದಮೆಯಾಗಿರುವುದಿಲ್ಲ. ಅಂಥ ದೀರ್ಘ ಸಮಯದ ತರುವಾಯ, ಆದ್ದರಿಂದ, ರಿಟ್ ಅರ್ಜಿಗಳು, ಅವು, ಅವುಗಳಂತೆಯೇ ಇದ್ದಾಗ್ಯೂ ಸಹ ಪುರಸ್ಕರಿಸಲಾಗದು. ದೀರ್ಘ ಸಮಯದ ತರುವಾಯ ಈ ನ್ಯಾಯಾಲಯಕ್ಕೆ ಮನವಿ ಮಾಡಿರುವ ಅವರ ಪರವಾಗಿ ವಿವೇಚನಾತ್ಮಕ ಅಧಿಕಾರ ವ್ಯಾಪ್ತಿಯನ್ನು ಸಹಾ ಚಲಾಯಿಸಲಾಗುವುದನ್ನು ಪರಿಗಣಿಸಲಾಗದು. ವಿಳಂಬ ಮತ್ತು ತಪ್ಪುಗಳು, ನ್ಯಾಯ ಸಮ್ಮತ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದಕ್ಕಾಗಿ ಸುಸಂಬದ್ಧ ಸಂಗತಿಗಳಾಗಿವೆ."*

20. ***ಶಂಕರ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ -ವಿರುದ್ಧ- ಎಂ.ಪ್ರಭಾಕರ್ ಮತ್ತು ಇತರರು*** [5] ಪ್ಯಾರಾ 46 ಮತ್ತು 54 ಪ್ರಕರಣದಲ್ಲಿ ಕಾಲ ಪರಿಮಿತಿ ಅಧಿನಿಯಮದ 5ನೇ ಪ್ರಕರಣದ ಉಪಬಂಧಗಳನ್ನು ಪರಿಗಣಿಸುವಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

*46) ಉಲ್ಲೇಖ: ವಿಳಂಬ ಮತ್ತು ಲೋಪಗಳು:- ವಿಳಂಬ ಮತ್ತು ಲೋಪಗಳು, ಭಾರತ ಸಂವಿಧಾನದ 226ನೇ ಅನುಚ್ಛೇಧದ ಅಡಿಯಲ್ಲಿ ಅವರು ತಮ್ಮ ವಿವೇಚನಾಧಿಕಾರವನ್ನು ಚಲಾಯಿಸುವಾಗ ಉಚ್ಚ ನ್ಯಾಯಾಲಯಗಳಿಗೆ ಇರಬೇಕಾದಂಥ ಅಗತ್ಯಪಡಿಸಿದ ಅಂಶಗಳಲ್ಲಿ ಒಂದಾಗಿದೆ. ಸಮುಚಿತ*

5. (2011) 5 ಎಸ್‌ಸಿಸಿ 607

*ಪ್ರಕರಣದಲ್ಲಿ, ಸಮಯದ ವಿಳಂಬದೊಂದಿಗೆ ಮತ್ತು ಇತರೇ ಸಂದರ್ಭಗಳಲ್ಲಿ ಸೇರಿಸಿ ತೆಗೆದುಕೊಳ್ಳಲಾದ ತಮ್ಮ ಹಕ್ಕುಗಳ ಬಗ್ಗೆ ಒತ್ತಿಹೇಳಲಾದ ಅಪೀಲುದಾರನ ಕಡೆಯಿಂದ ಅಂಥ ನಿರ್ಲಕ್ಷ್ಯತೆ ಅಥವಾ ಲೋಪವಾಗಿದ್ದಲ್ಲಿ, ಅದರ ವಿಶೇಷಾಧಿಕಾರಗಳನ್ನು ಬಳಸಿಕೊಂಡು ಉಚ್ಚ ನ್ಯಾಯಾಲಯ ತಿರಸ್ಕರಿಸಬಹುದು.*

*54. ಸುಸಂಬದ್ಧ ಪರಿಗಣನೆಗಳು, ವಿಳಂಬ ಅಥವಾ ಲೋಪಗಳನ್ನಾಗಲಿ ನಿರ್ಧರಿಸುವಾಗ, ಸಂವಿಧಾನದ 226ನೇ ಅನುಚ್ಛೇಧದ ಅಡಿಯಲ್ಲಿ, ರಿಟ್ ನ್ಯಾಯಾಲಯಕ್ಕೆ ಮನವಿ ಮಾಡಿರುವ ವ್ಯಕ್ತಿಯ ವಿರುದ್ಧ ತರತಕ್ಕದ್ದು ಎಂಬುದು ಈಗಾಗಲೇ ಇತ್ಯರ್ಥಗೊಂಡಿರುವುದಾಗಿದೆ. ಅವುಗಳೆಂದರೆ:*

*(1) ವಿಳಂಬವಾಗಿರುವಾಗ, ಈ ನ್ಯಾಯಾಲಯ, ಅರ್ಜಿ ಸ್ವೀಕರಿಸಿರುವುದನ್ನು ಅಗತ್ಯವಾಗಿ ತಿರಸ್ಕರಿಸಿದೆಯೆಂಬ ಕಾನೂನು ನಿಯಮವನ್ನು ಮೀರಕೂಡದು; ಅದು, ನ್ಯಾಯ ಸಮ್ಮತ ಮತ್ತು ಯುಕ್ತ ವಿವೇಚನೆಯ ಅಧಿಕಾರದ ಆಧಾರದ ಮೇಲೆ ಪದ್ಧತಿ ನಿಯಮವಾಗಿದ್ದು, ಮತ್ತು ಪ್ರತಿ ಪ್ರಕರಣ, ಸ್ವತಃ ಅದರ ಸಂಗತಿಗಳೊಂದಿಗೆ ವ್ಯವಹರಿಸತಕ್ಕದ್ದು.*

*(2) ಲೋಪಗಳು ಅಥವಾ ವಿಳಂಬದ ಕಾರಣದ ಮೇಲೆ ಪರಿಹಾರ ತಿರಸ್ಕರಿಸಿದ ನ್ಯಾಯಾಲಯದ ಅದರ ನಿಯಮದ ಮೇಲೆ, ಅರ್ಜಿಯನ್ನು ದಾಖಲು ಮಾಡುವಲ್ಲಿ ವಿಳಂಬದ ಮೂಲಕ ಇತರರಿಗೆ ಕೂಡಿ ಬರುವ ಹಕ್ಕುಗಳು, ಅದರ ಹೊರತಾಗಿ, ವಿಳಂಬದ ಯುಕ್ತ ವಿವರಣೆಯು, ನ್ಯಾಯಾಲಯ,*

*ತಮ್ಮ ಹಕ್ಕುಗಳ ಪಕ್ಷಕಾರರಿಗೆ ತೊಂದರೆ ಉಂಟಾಗಕೂಡದು. ವಿಳಂಬಕ್ಕೆ ಸೂಕ್ತವಾದ ವಿವರಣೆ ಇದ್ದ ಹೊರತು, ಅರ್ಜಿದಾರರ ಕಡೆಯಿಂದ ಆಗುವ ವಿಳಂಬಕ್ಕಾಗಿ ನ್ಯಾಯಾಲಯವು, ಮುಗ್ಧ ಪಕ್ಷಕಾರರು ಮತ್ತು ಅವರ ಹಕ್ಕುಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು.*

*(3) ಅವನು, ಕಾನೂನಿನ ಮೂಲಕ ನೀಡಲಾದ ರೀತಿಯಲ್ಲಿ ಅನ್ಯಥಾ ಪರಿಹಾರ ಕೋರಿದ್ದಾನೆಂಬುದನ್ನು ತೋರಿಸುವುದಕ್ಕೆ ಅರ್ಜಿದಾರನು, 226ನೇ ಅನುಚ್ಛೇಧದ ಅಡಿಯಲ್ಲಿ ಅರ್ಜಿಯನ್ನು ಹಾಕಲು ತೃಪ್ತಿಕರವಾದ ವಿಧಾನದಲ್ಲಿ ವಿಳಂಬಕ್ಕೆ ವಿವರಣೆ ನೀಡಬೇಕು. ಶಾಸನ ಅಥವಾ ಶಾಸನಾತ್ಮಕ ನಿಯಮಗಳಲ್ಲಿ ಉಪಬಂಧಿಸಲಾದಂತೆ ಅವನಿಗೆ ಪರಿಹಾರ ಸಿಗದಿದ್ದಲ್ಲಿ, ಆ ವಿಳಂಬವನ್ನು ಮನ್ನಾ ಮಾಡಲು ಉಚ್ಚ ನ್ಯಾಯಾಲಯ ಅಪೇಕ್ಷಿಸಲಾಗದು. ಪರಿಹಾರದ ಬಗ್ಗೆ ಏನನ್ನು ನಂಬಲು ಆಯ್ಕೆ ಮಾಡಿಕೊಳ್ಳುತ್ತಾನೆಂಬುದು ಅಪ್ರಸ್ತುತವಾದುದು.*

*(4) ಈ ಸಂಬಂಧದಲ್ಲಿ ಯಾವುದೇ ಕಠಿಣ ನಿಯಮಗಳು ಅಥವಾ ಜರೂರು ನಿಯಮಗಳನ್ನು ವಿಧಿಸಿರುವುದಿಲ್ಲ. ಪ್ರತಿಯೊಂದು ಪ್ರಕರಣವನ್ನು ಅದರ ಸ್ವತಃ ಸಂಗತಿಗಳ ಮೇಲೆ ನಿರ್ಧರಿಸಬಹುದಾಗಿದೆ.*

*(5) ಮನವಿಗಳು, ವಿಳಂಬದ ಬಗ್ಗೆ ಜಾಗರೂಕತೆ ತೆಗೆದುಕೊಳ್ಳುವುದರ ಬಗ್ಗೆ ಸಾಕಷ್ಟು ವಿವರಣೆಗಳನ್ನು ಒಳಗೊಂಡಿರುವುದಿಲ್ಲ.*

21. ಈ ಮೇಲಿನ ಕಾರಣಗಳ ದೃಷ್ಟಿಯಿಂದ ಮತ್ತು ಮೇಲೆ ಹೇಳಲಾದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ದೃಷ್ಟಿಯಿಂದ, ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯದಲ್ಲಿ, ಅರ್ಜಿದಾರರು, ಅಪೀಲನ್ನು ದಾಖಲು ಮಾಡಲು 13 ವರ್ಷಗಳ ವಿಳಂಬವನ್ನು ಮನ್ನಾ ಮಾಡುವ ಯಾವುದೇ ಸಾಕಷ್ಟು ಕಾರಣ ನೀಡಿರುವುದಿಲ್ಲ. ಆದ್ದರಿಂದ, 2ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು, ಮೈಸೂರು, 13 ವರ್ಷಗಳ ವಿಳಂಬವನ್ನು ಮನ್ನಾ ಮಾಡುವ ಕಾರಣದ ಮೇಲೆ ಅಪೀಲನ್ನು ವಜಾಗೊಳಿಸಿರುವುದು ನ್ಯಾಯಸಮ್ಮತವಾಗಿದೆಯೆಂದು ಅಭಿಪ್ರಾಯಪಟ್ಟು ಈ ಅರ್ಜಿಗಳಲ್ಲಿ ಎತ್ತಲಾದ ಅಂಶಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ. ಆದ್ದರಿಂದ, ಅರ್ಜಿದಾರರು, ಭಾರತ ಸಂವಿಧಾನದ 227ನೇ ಅನುಚ್ಛೇಧದ ಅಡಿಯಲ್ಲಿ ಈ ನ್ಯಾಯಾಲಯದ ಮೇಲ್ವಿಚಾರಣಾ ರಿಟ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಈ ಅಪೀಲಿನಲ್ಲಿ ಹಸ್ತಕ್ಷೇಪ ಮಾಡುವ ಯಾವುದೇ ಕಾರಣವನ್ನು ನೀಡಿರುವುದಿಲ್ಲ.

ಅದಕ್ಕನುಸಾರವಾಗಿ ಈ ರಿಟ್ ಅರ್ಜಿಗಳನ್ನು ವಜಾಗೊಳಿಸಲಾಗಿದೆ.

ಯಾವುದೇ ವೆಚ್ಚಗಳಿಲ್ಲ.